
# ಮಕ್ಕಳಿಗೆ 'ವಚನವೇದ'

(ಮಕ್ಕಳೇ, 'ಶ್ರೀರಾಮಕೃಷ್ಣ ವಚನವೇದ' ದಲ್ಲಿ ಬರುವ ಶ್ರೀರಾಮಕೃಷ್ಣರ ಮಾತು ತುಂಬ ಸರಳ, ಸುಂದರ. ಅದರ ಕೆಲವು ಹನಿಗಳನ್ನು ಸವಿಯಿರಿ –ಸಂ.)




ಶ್ರೀರಾಮಕೃಷ್ಣರು ಮಾಸ್ಟರ ಕಡೆ ನೋಡಿ ಹೇಳುತ್ತಿದ್ದಾರೆ: "ಅನುರಾಗವುಂಟಾಯಿತು ಎಂದರೆ ಭಗವಂತನ ದರ್ಶನ ದೊರೆಯುತ್ತದೆ. ತೀವ್ರ ವ್ಯಾಕುಲತೆ ಬೇಕು. ತೀವ್ರ ವ್ಯಾಕುಲತೆಯುಂಟಾದರೆ ಇಡೀ ಮನಸ್ಸು ಭಗವಂತನಲ್ಲಿ ಏಕಾಗ್ರಗೊಂಡುಬಿಡುತ್ತದೆ.

ಒಬ್ಬನಿಗೆ ಒಬ್ಬಳು ಮಗಳಿದ್ದಳು. ಬಹಳ ಚಿಕ್ಕವಳಿರುವಾಗಲೆ ಆಕೆ ವಿಧವೆಯಾಗಿಬಿಟ್ಟಳು. ಆಕೆ ಪತಿಯನ್ನು ಅರಿತವಳೇ ಅಲ್ಲ. ತನ್ನ ಜೊತೆಗಾತಿಯರ ಗಂಡಂದಿರನ್ನು ಕಂಡು ಒಂದು ದಿನ ತನ್ನ ತಂದೆಯನ್ನು ಕೇಳಿದಳು: "ಅಪ್ಪ, ನನ್ನ ಪತಿ ಎಲ್ಲಿದ್ದಾರೆ?" ಆಕೆಯ ತಂದೆ ಹೇಳಿದ: "ಗೋವಿಂದನೇ ನಿನ್ನ ಪತಿ. ಕರೆ, ಬರುತ್ತಾನೆ." ಈ ಮಾತನ್ನು ಕೇಳಿ ಆ ಹುಡುಗಿ ತನ್ನ ಕೊಠಡಿಯ ಬಾಗಿಲು ಹಾಕಿಕೊಂಡು ಗೋವಿಂದನನ್ನು ಕರೆಯುತ್ತ ಅಳಲಾರಂಭಿಸಿದಳು, "ಓ ಗೋವಿಂದ, ದಯವಿಟ್ಟು ಬಾ! ಕೃಪೆಯಿಟ್ಟು ನಿನ್ನ ದರ್ಶನ ಕೊಡು! ನೀನು ಏಕೆ ಬರುತ್ತಿಲ್ಲ, ಹೇಳು?" ಆ ಚಿಕ್ಕ ಹುಡುಗಿಯ ಹೃದಯವಿದ್ರಾವಕ ಅಳುವನ್ನು ನೋಡಿ ಆಕೆಗೆ ಭಗವಂತ ದರ್ಶನ ಕೊಡದೆ ಇರಲಾಗಲಿಲ್ಲ. ಆದ್ದರಿಂದ ಆಕೆಗೆ ದರ್ಶನವಿತ್ತ.

ಒಬ್ಬ ಬ್ರಾಹ್ಮಣನ ಮನೆಯಲ್ಲಿ ನಿತ್ಯವೂ ದೇವರ ಪೂಜೆ ನಡೆಯುತ್ತಿತ್ತು. ಒಂದು ದಿನ ಏನೋ ಕೆಲಸದ ನಿಮಿತ್ತ ಆ ಬ್ರಾಹ್ಮಣ ಬೇರೆ ಸ್ಥಳಕ್ಕೆ ಹೋಗಿಬರಬೇಕಾಗಿ ಬಂತು. ಆತ ತನ್ನ ಚಿಕ್ಕ ಮಗನಿಗೆ ಹೇಳಿಹೋದ, "ನೀನು ಇಂದು ದೇವರಿಗೆ ನೈವೇದ್ಯ ಅರ್ಪಿಸಿ ಊಟ ಬಡಿಸು." ಹುಡುಗ ದೇವರಿಗೆ ನೈವೇದ್ಯವನ್ನು ಅರ್ಪಿಸಿದ. ಆದರೆ ದೇವರು ಮಾತ್ರ ಸುಮ್ಮನೆ ಕುಳಿತಿದ್ದಾನೆ. ಮಾತೂ ಆಡುತ್ತಿಲ್ಲ, ಊಟವನ್ನೂ ಮಾಡುತ್ತಿಲ್ಲ. ಆ ಹುಡುಗ ಬಹಳ ಹೊತ್ತಿನವರೆಗೆ ಕುಳಿತು ನೋಡಿದ. ಆದರೂ ದೇವರು ಮಾತ್ರ ಮೇಲಕ್ಕೆ ಏಳಲೇ ಇಲ್ಲ. ಆತನು ಸಂಪೂರ್ಣವಾಗಿ ನಂಬಿದ್ದ, ದೇವರು ಎದ್ದುಬಂದು ಆಸನದ ಮೇಲೆ ಕುಳಿತುಕೊಂಡು ಊಟಮಾಡುತ್ತಾನೆ ಎಂದು. ಆಗ ಆ ಬಾಲಕ ಮತ್ತೆ ಮತ್ತೆ ಮೊರೆಯಿಡಲಾರಂಭಿಸಿದ, "ಹೇ ದೇವರೇ, ಆಸನದಲ್ಲಿ ಬಂದು ಕುಳಿತುಕೊಂಡು ಊಟಮಾಡು. ಈಗಾಗಲೇ ಬಹಳ ಹೊತ್ತಾಗಿಬಿಟ್ಟಿದೆ. ನನ್ನ ಕೈಯಲ್ಲಿ ಇನ್ನು ಕಾದು ಕುಳಿತಿರಲಾಗುವುದಿಲ್ಲ." ಹೀಗೆ ಮೊರೆಯಿಟ್ಟರೂ ದೇವರು ಒಂದು ಮಾತನ್ನೂ ಆಡಲಿಲ್ಲ. ಅದನ್ನು ನೋಡಿ ಹುಡುಗ ರೋದಿಸುತ್ತ ಮತ್ತೆ ಮತ್ತೆ ದೇವರಿಗೆ ಮೊರೆಯಿಡಲಾರಂಭಿಸಿದ, "ದೇವರೇ, ನಮ್ಮ ತಂದೆ ನಿನಗೆ ಊಟ ಬಡಿಸುವಂತೆ ಹೇಳಿ ಹೋಗಿದ್ದಾರೆ. ಏತಕ್ಕೆ ನೀನು ಎದ್ದುಬರುತ್ತಿಲ್ಲ? ನನ್ನ ಕೈಯಿಂದ ಏಕೆ ಊಟಮಾಡಲಿಚ್ಛಿಸುವುದಿಲ್ಲ?" ಆಗ ದೇವರು ಪೀಠದಿಂದ ನಗುತ್ತ ನಗುತ್ತ ಎದ್ದು ಬಂದು ಆಸನದ ಮೇಲೆ ಕುಳಿತುಕೊಂಡು ಊಟ ಮಾಡಲಾರಂಭಿಸಿದ. ಆ ಹುಡುಗ ದೇವರಿಗೆ ಊಟಬಡಿಸಿ ದೇವರ ಮನೆಯಿಂದ ಹೊರಕ್ಕೆ ಬಂದ. ಮನೆಯವರು ಕೇಳಿದರು, "ನೈವೇದ್ಯ ಅರ್ಪಿಸಿ ಆಯಿತೇ? ಹಾಗಾದರೆ ಎಲ್ಲವನ್ನೂ ತೆಗೆದುಕೊಂಡು ಬಂದುಬಿಡು." ಆ ಹುಡುಗ ಹೇಳಿದ, "ಹೌದು, ನೈವೇದ್ಯವನ್ನು ಅರ್ಪಿಸಿಯಾಯಿತು. ದೇವರು ಎಲ್ಲವನ್ನೂ ಊಟಮಾಡಿಬಿಟ್ಟ." ಇದನ್ನು ಕೇಳಿ ಅವರು ಹೇಳಿದರು, "ಅದು ಹೇಗೋ?" ಆ ಹುಡುಗ ತನ್ನ ಸರಳಬುದ್ಧಿಯಿಂದ ಹೇಳಿದ, "ಏಕೆ ಹೀಗೆ ಕೇಳುತ್ತೀರಿ? ದೇವರು ಊಟಮಾಡಿಬಿಟ್ಟ." ಬಳಿಕ ಎಲ್ಲರೂ ದೇವರ ಮನೆಗೆ ಹೋಗಿನೋಡಿ, ಸುಮ್ಮನೆ ಆಶ್ಚರ್ಯಪಡಲಾರಂಭಿಸಿದರು.

ಜಟಿಲ ಎಂಬ ಬಾಲಕನ ಕಥೆ ಇದೆ, ಕೇಳು. ಆ ಬಾಲಕ ಒಂದು ಕಾಡಿನ ಮೂಲಕ ಹಾದು ತನ್ನ ಶಾಲೆಗೆ ಹೋಗಬೇಕಾಗಿತ್ತು. ಕಾಡುದಾರಿ ಅವನಿಗೆ ಬಹಳ ಹೆದರಿಕೆಯನ್ನು ಉಂಟುಮಾಡುತ್ತಿತ್ತು. ಆ ಹುಡುಗ ತನ್ನ ಭಯವನ್ನು ಒಂದು ದಿನ ತನ್ನ ತಾಯಿಗೆ ತಿಳಿಸಿದ. ಆಕೆ ಹೇಳಿದಳು, "ನೀನೇಕೆ ಭಯಪಡಬೇಕು? ಮಧುಸೂದನನನ್ನು ಕರೆ." ಆ ಬಾಲಕ ಆಕೆಯನ್ನು ಕೇಳಿದ, "ಅಮ್ಮಾ, ಮಧುಸೂದನ ಯಾರು?" ತಾಯಿ ಹೇಳಿದಳು, "ಆತ ನಿನ್ನ ಅಣ್ಣ." ಈ ಮಾತುಕತೆಯಾದ ಬಳಿಕ ಒಂದು ದಿನ ಕಾಡಿನಲ್ಲಿ ಹೋಗುತ್ತಿದ್ದಾಗ ಆ ಬಾಲಕನಿಗೆ ಮತ್ತೆ ಹೆದರಿಕೆಯಾಯಿತು. ಆಗ ಆ ಬಾಲಕ ಕೂಗಲಾರಂಭಿಸಿದ,



"ಅಣ್ಣಾ, ಮಧುಸೂದನಾ!" ಎಲ್ಲಿ, ಮಧುಸೂದನನೂ ಇಲ್ಲ, ಗಿಧುಸೂದನನೂ ಇಲ್ಲ. ಆಗ ಆ ಬಾಲಕ ಅಳುತ್ತ ತಾರಸ್ವರದಿಂದ ಕೂಗಲಾರಂಭಿಸಿದ, "ಎಲ್ಲಿದ್ದೀಯೋ ಅಣ್ಣಾ, ಮಧುಸೂದನಾ? ಬೇಗ ಬಾರೋ. ನನಗೆ ಬಹಳವಾಗಿ ಹೆದರಿಕೆಯಾಗುತ್ತಿದೆ ಕಣೋ!" ಭಗವಂತನಿಗೆ ಆಗ ಸುಮ್ಮನಿರಲಾಗಲಿಲ್ಲ. ಆತ ಆ ಬಾಲಕನಿಗೆ ಹೇಳಿದ, "ನೋಡು, ಇಲ್ಲೇ ನಾನೂ ಇದ್ದೇನೆ. ನೀನೇಕೆ ಭಯಪಟ್ಟುಕೊಳ್ಳಬೇಕೋ" ಹೀಗೆಂದು ಹೇಳಿ ಆ ಬಾಲಕನನ್ನು ಕಾಡಿನ ಕೊನೆಯವರೆಗೂ ಕರೆದುಕೊಂಡು ಹೋಗಿ ಶಾಲೆಗೆ ದಾರಿ ತೋರಿಸಿದ. ಆತನಿಂದ ಬೀಳ್ಕೊಂಡಾಗ ಭಗವಂತ ಆ ಬಾಲಕನಿಗೆ ಹೇಳಿದ, "ನೀನು ಕರೆದಾಗಲೆಲ್ಲ ನಾನು ಬಂದುಬಿಡುತ್ತೇನೆ. ಹೆದರಿಕೊಳ್ಳಬೇಡ.." ಬಾಲಕನ ಇಂಥ ವಿಶ್ವಾಸ, ವ್ಯಾಕುಲತೆ ಬೇಕು.

ಶ್ರೀರಾಮಕೃಷ್ಣರು ಮಾಸ್ಟರಿಗೆ ಹೇಳುತ್ತಿದ್ದಾರೆ, "ನೋಡು, ಮುಖ್ಯವಾಗಿ ಮಾಡಬೇಕಾದ್ದು– **ಭಗವಂತನಲ್ಲಿ ಭಕ್ತಿ ಬೆಳೆಸಿಕೊಳ್ಳುವುದು. ಆತನನ್ನು ಪ್ರೀತಿಸುವುದು."**

ರಾತ್ರಿ ಮೂರು ಗಂಟೆ. ಇದ್ದಕ್ಕಿದ್ದ ಹಾಗೆ ದೂರದಿಂದ ಯಾರೋ, "ಓ, ಅಣ್ಣಾ, ಮಧುಸೂದನಾ! ಎಲ್ಲಿದ್ದೀಯೋ" ಎಂದು ಆರ್ತನಾದ ಮಾಡುತ್ತಿದ್ದ ಹಾಗೆ ಕೇಳಿಬಂತು. ಪಂಚವಟಿಯ ದಟ್ಟ ಮರಗಳ ಸಂದಿಗೊಂದಿಗಳಿಂದ ಬೆಳದಿಂಗಳು ಪ್ರವಹಿಸಿ ನೆಲದ ಮೇಲೆ ಬೀಳುತ್ತಿತ್ತು. ಹಾಗೆಯೇ ಸ್ವಲ್ಪ ದೂರ ಮುಂದುವರಿದ ನಂತರ ಕಂಡುಬಂತು, ಪರಮಹಂಸರ ಶಿಷ್ಯನೊಬ್ಬ ಪಂಚವಟಿಯಲ್ಲಿ ಧ್ಯಾನಕ್ಕೆ ಕುಳಿತಿರುವುದು. ಆತ ಆರ್ತನಾದ ಮಾಡುತ್ತಿದ್ದಾನೆ, "ಓ ಅಣ್ಣಾ! ಮಧುಸೂದನಾ! ಎಲ್ಲಿದ್ದೀಯೋ" ಎಂದು.

**(ಶ್ರೀರಾಮಕೃಷ್ಣ ವಚನವೇದ, ಪೂರ್ವಾರ್ಧ, ಪುಟ ೩೪೪–೩೪೭)**

## ವಾರ್ತಾ ವಿಶ್ಲೇಷಣೆ

## ಹಿಂದೂ 'ಬೈಬಲ್'?

ಎರಡು ವರ್ಷಗಳ ಹಿಂದೆ 'New Community Bible' (ನೂತನ ಸಮುದಾಯ ಬೈಬಲ್) ಭಾರತದಲ್ಲಿ ಪ್ರಕಟವಾಯಿತು. ಅಲ್ಲಿ ಬೈಬಲ್ಲಿನ ಪಾತ್ರಗಳನ್ನು ಭಾರತೀಯ ಪಾರಂಪರಿಕ ಉಡುಪಿನಲ್ಲಿ ತೋರಿಸಿರುವ ಚಿತ್ರಗಳನ್ನು ಮುದ್ರಿಸಲಾಗಿದೆ. ಹಾಗೆಯೇ ಮಹಾತ್ಮ ಗಾಂಧಿ, ಮದರ್ ಥೆರೇಸಾ ಮುಂತಾದವರ ಮತ್ತು ಭಗವದ್ಗೀತೆ ಮುಂತಾದ ಹಿಂದೂ ಧರ್ಮಗ್ರಂಥಗಳ ಉಲ್ಲೇಖಗಳೂ ಈ ಆವೃತ್ತಿಯಲ್ಲಿ ಬರುತ್ತವೆ. ಕೆಲವೇ ವಾರಗಳಲ್ಲಿ ಈ ಬೈಬಲ್ಲಿನ ೧೫,೦೦೦ ಪ್ರತಿಗಳು ಮಾರಾಟವಾಗಿವೆಯಂತೆ. ಕ್ಯಾಥೊಲಿಕ್ ಚರ್ಚ್ ಪ್ರಕಟಿಸಿರುವ ಈ ಪುಸ್ತಕದ ಸಂಪಾದಕ ಮುಂಬೈನ ಒಬ್ಬ ಕ್ರೈಸ್ತ ಪಾದ್ರಿಯಾದ ಫಾದರ್ ದೆವಾಸ್ಸಿ ಎಂಬುವವರು. ಈಗ ಎರಡನೆಯ ಆವೃತ್ತಿ ಕೂಡ ಪ್ರಕಟವಾಗಲು ಸಿದ್ಧವಾಗಿದೆಯಂತೆ. ಈ ಸಲ ೫೦,೦೦೦ ಪ್ರತಿಗಳನ್ನು ಮುದ್ರಿಸುವ ಆಕಾಂಕ್ಷೆ ಇಟ್ಟುಕೊಂಡಿದ್ದಾರೆ ಫಾದರ್ ದೇವಾಸ್ಸಿ ಅವರು.

ಆದರೆ ಇದಕ್ಕೆ ಹಿಂದೂ ಪಂಗಡಗಳಿಂದ ಮತ್ತು ಪ್ರಾಟೆಸ್ಟೆಂಟ್ ಕ್ರೈಸ್ತ ಮತೀಯರಿಂದ ವಿರೋಧ ವ್ಯಕ್ತವಾಗಿದೆ. ಈ ಮೂಲಕ ಮತಾಂತರಕ್ಕೆ ಸಂಚು ನಡೆಯುತ್ತಿದೆ ಎಂದು ಹಿಂದೂಗಳು ವಾದಿಸಿದರೆ, ಮೂಲ ಬೈಬಲ್ಲಿನ ಸಾಹಿತ್ಯವನ್ನು ತಿರುಚಲಾಗುತ್ತಿದೆ ಎಂದು ಪ್ರಾಟೆಸ್ಟೆಂಟ್ ಪಂಗಡದ ಜನ ದೂರುತ್ತಿದ್ದಾರೆ. ಆದರೆ ಫಾದರ್ ದೇವಾಸ್ಸಿ ಈ ಟೀಕೆಟಿಪ್ಪಣಿಗಳಿಂದ ಎಳ್ಳಷ್ಟೂ ವಿಚಲಿತರಾಗಿಲ್ಲ. "ಈ ಸಮಸ್ಯೆಗಳು ದೇವರು ಮಾಡಿದವುಗಳಲ್ಲ. ಅವನ್ನು ಮನುಷ್ಯರು ಮಾಡಿರುವುದು. ಆದ್ದರಿಂದ ಅವು ನಿಜವಾದ ಸಮಸ್ಯೆಗಳೇ ಅಲ್ಲ" ಎಂದು ಅವರು ಹೇಳುತ್ತಾರೆ. ಆದರೆ, ಎರಡನೆಯ ಆವೃತ್ತಿಯಲ್ಲಿ ಕೆಲವಾರು ಅಂಶಗಳನ್ನು ಕೈಬಿಡಲು ಅವರು ಸಿದ್ಧರಿದ್ದಾರೆ. ಅವುಗಳಲ್ಲಿ ಭಗವದ್ಗೀತೆಯೂ ಒಂದು.

ಕ್ರೈಸ್ತ ಧರ್ಮವನ್ನು ಭಾರತೀಕರಣ ಮಾಡುವ ಪ್ರಯತ್ನಗಳು ನಡೆಯುತ್ತಲೇ ಇವೆ. ಸ್ಥಳೀಯ ಪೂಜೆ ಆಚರಣೆಗಳಿಗೆ ಸೀಮಿತವಾಗಿದ್ದ ಈ ಯತ್ನಗಳು ಇಂದು ಕ್ರೈಸ್ತರ ಪವಿತ್ರಗ್ರಂಥವನ್ನೂ 'ಹಿಂದೂಮಯ' ವನ್ನಾಗಿ ಮಾಡುವ ಹಂತಕ್ಕೆ ಹೋಗಿಬಿಟ್ಟಿವೆ. ಕ್ರೈಸ್ತ ಧರ್ಮವನ್ನು ಭಾರತದಲ್ಲಿ ಪ್ರಚಾರ ಮಾಡುವುದಕ್ಕೆ ಭವಿಷ್ಯದಲ್ಲಿ ಇನ್ನಾವ ವಿಧಾನಗಳನ್ನು ಬಳಸಲಾಗುವುದೋ, ಆ ಏಸುಕ್ರಿಸ್ತನೇ ಬಲ್ಲ.